## ‘ಪ್ರೀತಿ ಎಲ್ಲವನ್ನೂ ಗೆಲ್ಲುತ್ತದೆ...’



ಈಚೆಗೆ ತೆರೆಕಂಡ ‘ಸಪ್ತಸಾಗರದಾಚೆ ಎಲ್ಲೊ’ ಚಿತ್ರ, ಸಿನಿರಸಿಕರ ಮನಗೆದ್ದಿದೆ. ‘ಗೋಧಿ ಬಣ್ಣ ಸಾಧಾರಣ ಮೈಕಟ್ಟು’ ನಂತರ ನಟ ರಕ್ಷಿತ್ ಶೆಟ್ಟಿ –ಹೇಮಂತ್ ಎಂ. ರಾವ್ ಕಾಂಬಿನೇಷನ್‌ನ ಈ ಎರಡನೇ ಚಿತ್ರಕ್ಕೆ ಪಾಸಿಟಿವ್ ಪ್ರತಿಕ್ರಿಯೆಗಳು ಬಂದಿದ್ದು, ಇದೇ ಸಂತಸದಲ್ಲಿರುವ ಹೇಮಂತ್, ಸಿನಿಮಾದ ಎರಡನೇ ಭಾಗದ ಕುರಿತು ಮಾತನಾಡಿದ್ದಾರೆ.

‘ಗೋಪಾಲಕೃಷ್ಣ ಅಡಿಗರ ಪದ್ಯದಿಂದ ತೆಗೆದುಕೊಂಡ ಸಾಲು ‘ಸಪ್ತಸಾಗರದಾಚೆ ಎಲ್ಲೊ’ ಭಾವನೆಯೊಂದನ್ನು ಪ್ರತಿನಿಧಿಸುತ್ತದೆ. ಅದೇ ನನ್ನ ಸಿನಿಮಾದ ಜೀವಾಳ. ಈ ಸಿನಿಮಾವನ್ನು ದೃಶ್ಯ ಹಾಗೂ ಸಂಗೀತದ ಮೂಲಕ ಒಂದು ಕವಿತೆಯ ರೀತಿ ತೋರಲು ಪ್ರಯತ್ನಿಸಿದ್ದೇನೆ’ ಎಂದು ಹೇಳಿದ್ದಾರೆ.

‘ಪ್ರೀತಿ ಎಲ್ಲವನ್ನೂ ಗೆಲ್ಲಬಲ್ಲದು. ಪ್ರೇಮಕಥೆಯ ಸಿನಿಮಾ ವಿಶೇಷ ಎಂದರೆ, ವಿಶಿಷ್ಟ ಅನುಭವ, ಅನುಭೂತಿಯೊಂದನ್ನು ಸೃಷ್ಟಿಸುವುದು, ಎರಡು ಜೀವಗಳ ನಡುವಿನ ಅಪೂರ್ವ ಕ್ಷಣವನ್ನು, ಅದರ ಅನುಭವವನ್ನು ವೀಕ್ಷಕರಿಗೂ ದಾಟಿಸುವುದು’ ಎಂದು ತಮ್ಮ ಪ್ರೇಮಕಥನದ ಸಿನಿಮಾ ಬಗ್ಗೆ ವಿವರಣೆ ನೀಡಿದ್ದಾರೆ.

‘ಸಪ್ತಸಾಗರದಾಚೆ ಎಲ್ಲೊ’ ಸಿನಿಮಾವನ್ನು ಮತ್ತೊಂದು ಭಾಗದಲ್ಲಿ ತರಲು ನಿರ್ಧರಿಸಲಾಗಿದೆ. ಪಾರ್ಟ್ 1, ಪಾರ್ಟ್ 2 ಎನ್ನುವುದಕ್ಕಿಂತ, ಆಗ ಆಡಿಯೊ ಕ್ಯಾಸೆಟ್‌ಗಳಲ್ಲಿದ್ದಂತೆ ಸೈಡ್ ಎ, ಸೈಡ್ ಬಿ ಎಂದು ಕಥೆಯನ್ನು ಎರಡು ಭಾಗಗಳಲ್ಲಿ ಹೊರ ತರಲಾಗುತ್ತಿದೆ.

‘ಒಂದೇ ಭಾಗದಲ್ಲಿ ಹೇಳಿಮುಗಿಸಲು ಸಾಧ್ಯವಿಲ್ಲದಂಥ ದೊಡ್ಡ ಕಥೆಯಿದು. ಈ ಸಿನಿಮಾದಲ್ಲಿ ಬರುವ ಮನು, ಪ್ರಿಯಾ, ಸುರಭಿ ಪಾತ್ರಗಳ ಪಯಣ ಬೇರೆ ಹಂತಕ್ಕೆ ಹೋಗುತ್ತದೆ. ‘ಸೈಡ್ ಬಿ’ಯಲ್ಲಿ, ಹತ್ತು ವರ್ಷಗಳ ನಂತರ ಏನೆಲ್ಲಾ ಬದಲಾವಣೆಯಾಗಿರುತ್ತದೆ ಎಂಬ ಕಥೆಯಿರುತ್ತದೆ’ ಎಂದು ಮಾಹಿತಿ ನೀಡಿದ್ದಾರೆ.



## ಕನ್ನಡ ಸಿನಿಮಾ ಗ್ರಾಫ್; ನಭಾ ಖುಷಿ ಮಾತು

ಭುಜಕ್ಕೆ ಪೆಟ್ಟಾಗಿ ಸ್ವಲ್ಪ ಸಮಯ ಸಿನಿಮಾದಿಂದ ದೂರವುಳಿದಿದ್ದ ನಟಿ ನಭಾ ನಟೇಶ್, ಮತ್ತೆ ಸಿನಿಮಾಗಳೆಡೆ ಮುಖ ಮಾಡುವ ಹಂಬಲದಲ್ಲಿದ್ದಾರೆ. ಈಚಿನ ವರ್ಷಗಳಲ್ಲಿ ಕನ್ನಡ ಸಿನಿಮಾಗಳು ಸಾಗುತ್ತಿರುವ ಹಾದಿಯ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

‘ಕನ್ನಡ ಸಿನಿಮಾರಂಗದ ಗ್ರಾಫ್ ಹಿಂದೆಂದಿಗಿಂತಲೂ ಏರುಗತಿಯಲ್ಲಿದೆ. ಈ ನೆಲದ ಸಂಸ್ಕೃತಿಯೇ ಸಿನಿಮಾಗಳ ಬಹುದೊಡ್ಡ ಶಕ್ತಿಯಾಗಿದೆ. ನಿರ್ದೇಶಕರು ಹೊಸ ಹೊಸ ರೀತಿಯ ಕಥೆಗಳನ್ನು ಕೆದಕುತ್ತಾ ಅನ್ವೇಷಿಸುತ್ತಿದ್ದಾರೆ. ಅವು ದೊಡ್ಡ ಮಟ್ಟದಲ್ಲಿ ಗೆಲ್ಲುತ್ತಿವೆ ಕೂಡ’ ಎಂದಿದ್ದಾರೆ.

‘ಎಲ್ಲೆಡೆಯೂ ಪ್ರಾದೇಶಿಕ ಕಂಟೆಂಟ್‌ಗಳು ಮುನ್ನೆಲೆಗೆ ಬರುತ್ತಿವೆ. ಜನರು ಕೂಡ ತಮ್ಮ ಇತಿಹಾಸ, ನೆಲದ ಕಥೆಯ ಕುರಿತು ಆಸಕ್ತಿ ಹೊಂದಿದ್ದಾರೆ. ಎರಡು ದಶಕಗಳ ಹಿಂದೆ, ಪ್ರಾದೇಶಿಕ ಸಿನಿಮಾವೊಂದು ಜಾಗತಿಕ ಮಟ್ಟಕ್ಕೆ ತಲುಪಲು ಹಾಗೂ ಅಲ್ಲಿ ಗುರುತು ಮೂಡಿಸಲು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆ ಮುಖ್ಯವಾಗಿತ್ತು. ಆನಂತರ, ಅದರಲ್ಲೂ ಕೊರೊನಾನಂತರ ನಾವು ನಮ್ಮ ಬೇರುಗಳೆಡೆಗೆ ಸಾಗುತ್ತಿದ್ದೇವೆ ಅನಿಸುತ್ತಿದೆ. ಇದು ನಮ್ಮನ್ನು ವಿಶ್ವ ನಕ್ಷೆಯಲ್ಲಿ ಗುರುತಿಸಿಕೊಳ್ಳುವಂತೆ ಮಾಡುತ್ತಿದೆ’ ಎಂದು ಸಂತಸದಿಂದ ಮಾತನಾಡಿದ್ದಾರೆ.

ಚಿತ್ರ ಕಥೆಗಳಲ್ಲಷ್ಟೇ ಅಲ್ಲ, ಮಹಿಳೆಯರಿಗಾಗಿ ಸೃಷ್ಟಿಯಾಗುತ್ತಿರುವ ಪಾತ್ರಗಳಲ್ಲೂ ಪಾಸಿಟಿವ್ ಬದಲಾವಣೆಯಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ನಭಾ. ‘ಸಮಾಜವನ್ನು ಒಟ್ಟಾರೆ ನೋಡುವುದಾದರೆ, ಮಹಿಳೆಯರು ಈಗ ಆರ್ಥಿಕವಾಗಿ, ಭಾವನಾತ್ಮಕವಾಗಿ ಹೆಚ್ಚು ಸ್ವಾವಲಂಬಿಗಳಾಗಿದ್ದಾರೆ. ತನ್ನನ್ನು ಮತ್ತೊಬ್ಬರು ಕಾಪಾಡಬೇಕು ಎಂದು ಅವರು ಕಾಯುತ್ತಿಲ್ಲ. ಸಮಾಜದ ಪ್ರತಿಬಿಂಬವಾಗಿರುವ ಸಿನಿಮಾಗಳಲ್ಲೂ ಇದು ಕಾಣುತ್ತಿದೆ. ಹೀಗಾಗಿ ಇಂಥ ಮಹಿಳೆಯರ ಕುರಿತ ಬರಹವೂ ಹೆಚ್ಚುತ್ತಿದೆ. ಮುಖ್ಯವಾಹಿನಿಯ ಸಿನಿಮಾಗಳಲ್ಲೂ ಹುಡುಗಿಯರನ್ನು ಕೇವಲ ಬೊಂಬೆಯಂತೆ ತೋರಿಸುವುದಕ್ಕಿಂತ ಅವರಿಗಾಗಿ ವಸ್ತುವಿಷಯ ಗಟ್ಟಿಯಿರುವ ಪಾತ್ರ ಸೃಷ್ಟಿ ಆಗುತ್ತಿದೆ’ ಎಂದಿದ್ದಾರೆ.